
# ನಿರ್ಲಿಪ್ತ ಸಜ್ಜನ — ಕೆಡುಕಿನ ಮೂಲ

**ಡಾ. ನಿರಂಜನ ವಾನಳ್ಳಿ**




ನಮ್ಮ ಉಚ್ಚ ಶಿಕ್ಷಣದ ಕೇಂದ್ರಗಳಲ್ಲಿ ಸಾಮಾನ್ಯವಾಗಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆ ಎಷ್ಟು ಗಂಭೀರವೋ ಅಷ್ಟೇ ಸಂಕೀರ್ಣವೂ ಹೌದು.

ಸಾವಿರಾರು ಯುವಕರು ಅಧ್ಯಯನ ಮಾಡುತ್ತಿರುವ ಕಡೆಗಳಲ್ಲಿ ತಮ್ಮ ಅಧ್ಯಯನದ ಉದ್ದೇಶಗಳ ಬಗ್ಗೆ ತಲೆ ಕೆಡಿಸಿಕೊಳ್ಳದ ಕೆಲವರಾದರೂ ಇರುತ್ತಾರೆ. ಅಂಥ ಕೆಲವರು ಒಂದೆಡೆ ಸೇರುತ್ತಾರೆ. ಯಾರದೋ ಹಠಕ್ಕಾಗಿ, ಯಾವನದೋ ಅನುಕೂಲಕ್ಕಾಗಿ ಧಿಡೀರ್ ನಿರ್ಧಾರವಾಗುತ್ತದೆ 'ಇವತ್ತು ಸ್ಟ್ರೈಕ್ ಮಾಡೋಣ!' ಇದಕ್ಕೆ ಮುಂದಿನ ಪ್ರತಿಕ್ರಿಯೆಯಾಗಿ ಶಿಳ್ಳೆಗಳು ಆರಂಭವಾಗುತ್ತವೆ. ಇಡೀ ಕ್ಯಾಂಪಸ್ಸಿನಲ್ಲಿ ಕಿವಿಗಳು ನೆಟ್ಟಗಾಗುತ್ತವೆ. ಇದೇ ನಾಲ್ಕು ಜನ ಸ್ವಯಂಘೋಷಿತ ನಾಯಕರುಗಳು ಶಿಳ್ಳೆ ಹೊಡೆಯುತ್ತಾ ತರಗತಿಗಳಿಗೆ ನುಗ್ಗುತ್ತಾರೆ. ವಿದ್ಯಾರ್ಥಿಗಳನ್ನು ಹೊರಗೆ ಕರೆಯುತ್ತಾರೆ. ಮೇಷ್ಟ್ರುಗಳು ತಮಗೇಕೆ ಇಲ್ಲದ ಉಸಾಬರಿಯೆಂದು ತರಗತಿಗಳಿಂದ ಹೊರಬಂದು ತಮ್ಮ ತಮ್ಮ ಗೂಡುಗಳನ್ನು ಸೇರಿಕೊಳ್ಳುತ್ತಾರೆ. ನಾಯಕಮಣಿಗಳು ಒಂದೊಂದೇ ಕ್ಲಾಸು ಬಿಡಿಸುತ್ತಾ ಸಾಗುವುದರಿಂದ ಸಣ್ಣ ನದಿಗಳು ಸೇರಿ ದೊಡ್ಡ ನದಿ ಆಗುವಂತೆ ತರಗತಿಯಿಂದ ತರಗತಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಾ ಸ್ಟ್ರೈಕು ಮಾಡುವರ ದಂಡು ಬೆಳೆಯುತ್ತದೆ.

> ಧೈರ್ಯವಂತರು ಕೆಲವರೇ ಇದ್ದರೂ ಮಹತ್ತಾದ್ದನ್ನು ಸಾಧಿಸಬಹುದೆಂದು ವಿವೇಕಾನಂದರು ನಂಬಿದ್ದರು. ಈಗ ನಮ್ಮಲ್ಲಿ ಒಳ್ಳೆಯವರು ಅನ್ಯಾಯವನ್ನು ಪ್ರತಿಭಟಿಸದವರಾಗುತ್ತಿದ್ದಾರೆ. ಹೀಗಾಗಿ ಕೆಡುಕೇ ವಿಜೃಂಭಿಸುತ್ತಿದೆ. ನಮ್ಮ ಉಚ್ಚ ಶಿಕ್ಷಣದ ಕೇಂದ್ರಗಳಲ್ಲಿ ಆಗುತ್ತಿರುವುದು ಇದೇ.

ಕ್ಲಾಸುಗಳಿಂದ ಹೊರಬರುವ ವಿದ್ಯಾರ್ಥಿಗಳು ಅಲ್ಲಲ್ಲಿ ಚದುರಿ ಹೋಗುತ್ತಾರೆ. ಪಾರ್ಕುಗಳಲ್ಲೋ ಸಿನಿಮಾ ಮಂದಿರಗಳಲ್ಲೋ ಇವರಲ್ಲಿ ಕೆಲವರು ಕರಗಿಹೋಗುತ್ತಾರೆ. ಇತರರಿಂದ 'ಗಾಂಧಿ' ಅನ್ನಿಸಿಕೊಳ್ಳುವವರು ಮನೆಯ ಹಾದಿ ಹಿಡಿಯುತ್ತಾರೆ. ಸ್ಟ್ರೈಕಿನ ಫಲಾನುಭವಿಗಳಾದ ಹೆಚ್ಚಿನ ವಿದ್ಯಾರ್ಥಿಗಳಿಗೆ ಯಾವ ಕಾರಣಕ್ಕೆ ಸ್ಟ್ರೈಕು ಎಂಬ ಅಂಶವೇ ಗೊತ್ತಿರುವುದಿಲ್ಲ. ಅವರ ಲೆಕ್ಕದಲ್ಲಿ ವಿದ್ಯಾರ್ಥಿ ದೆಸೆಯ ಆ ದಿನ ಮುಗಿಯಿತು ಎಂಬುದಷ್ಟೇ ಗೊತ್ತು.

ಶಾಲೆ-ಹೈಸ್ಕೂಲುಗಳಲ್ಲಿ ಸಾಮಾನ್ಯವಾಗಿ ಈ ಸ್ಟ್ರೈಕೆಂಬ ಪಿಡುಗು ಇರುವುದಿಲ್ಲ. ಕಾಲೇಜಿಗೆ ಬಂದಾಗ ಏಕಾಏಕಿ ಮಕ್ಕಳು ಸ್ಟ್ರೈಕು ಮಾಡುವಷ್ಟು ದೊಡ್ಡವರಾಗಿ ಬಿಡುವುದು ವಿಶೇಷ. ಅನ್ಯಾಯದ ವಿರುದ್ಧ ಹೋರಾಟ ಒಳ್ಳೆಯ ಗುಣವೇ. ನಮ್ಮಲ್ಲಿ ಸಮಸ್ಯೆಯೆಂದರೆ ಹೋರಾಡ ಬೇಕಾದ, ನಿಜಕ್ಕೂ ಪ್ರತಿಭಟಿಸ ಬೇಕಾದ ಸಂಗತಿಗಳಿಗೆ ನಾವು ತಲೆಬಾಗಿಬಿಡುತ್ತೇವೆ. ಮೌನದಲ್ಲಿ ಅತ್ತರೂ ಹೊರಗೆ ಸುಮ್ಮನಿರುತ್ತೇವೆ. ಬೇಡದ್ದಕ್ಕೆ, ನಮಗೆ ಸಂಬಂಧವೇ ಇರದ ವಿಷಯಗಳಿಗೆ ಸ್ಟ್ರೈಕಿನ ಅಸ್ತ್ರವನ್ನು ಬಳಸುತ್ತೇವೆ. ಮಾತುಕತೆಯಲ್ಲಿ ಬಗೆಹರಿಸಬಹುದಾದ ಎಷ್ಟೋ ಸಣ್ಣ ಸಣ್ಣ ವಿಷಯಗಳಿಗೆ ಪ್ರತಿಭಟನೆಯ ಅಸ್ತ್ರ ದುರ್ಬಳಕೆಯಾಗುತ್ತದೆ.

ಹೀಗೆ ಕಾಲೇಜುಗಳಲ್ಲಿ ಸ್ಟ್ರೈಕು ಆದಾಗಲೆಲ್ಲ ಮೊದಲ ಬಲಿಯಾಗುವುದು ಪಾಠ-ಪ್ರವಚನ. ಹೆಚ್ಚಿನ ಸ್ಟ್ರೈಕುಗಳು ತರಗತಿ ಬಿಡಿಸಿದ ಕೂಡಲೇ ಪರ್ಯವಸಾನಗೊಳ್ಳುತ್ತವೆ. ಇಂಥ ಪುಡಿ ಪುಡಿ ಸ್ಟ್ರೈಕುಗಳಿಂದಾಗಿ ವರ್ಷಕ್ಕೆ ತಿಂಗಳುಗಟ್ಟಲೆ ಪಾಠ-ಪ್ರವಚನದ

ಡಾ. ನಿರಂಜನ ವಾನಳ್ಳಿಯವರು ಹಲವಾರು ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿದ್ದಾರೆ. ವಿಶೇಷವಾಗಿ 'ವಿಜಯಕರ್ನಾಟಕ'ದಲ್ಲಿ ನಿಯತ ಅಂಕಣಕಾರರು. ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಶಿಕ್ಷಣ ಪಡೆದ ಇವರು ಸಾಮಾಜಿಕ ಸಮಸ್ಯೆಗಳ ಬಗ್ಗೆ, ಯುವಜನರ ಸಮಸ್ಯೆಗಳ ಬಗ್ಗೆ ಗಂಭೀರ ಚಿಂತಕರು.

ಸಮಯ ನಷ್ಟವಾದರೂ ಯಾರಿಗೂ ಏನೂ ಅನ್ನಿಸುವುದೇ ಇಲ್ಲ. ಮೇಷ್ಟ್ರುಗಳಾಗಲೀ, ಬುದ್ಧಿಜೀವಿಗಳಾಗಲೀ ಇದರ ಬಗ್ಗೆ ತುಟಿ ಬಿಚ್ಚುವುದಿಲ್ಲ. ಅಂದರೆ ನಮ್ಮ ವಿದ್ಯಾರ್ಥಿಗಳಿಗೆ ಮೇಷ್ಟ್ರುಗಳ ಪಾಠದ ಮೇಲೆ ಯಾಕಿಷ್ಟು ದ್ವೇಷ? ಅವರ ಪಾಠ ತಪ್ಪಿಹೋದರೆ ಯಾರೂ ಪರಿತಪಿಸದ ಹಂತ ತಲುಪಿರುವುದು ಮೇಷ್ಟ್ರುಗಳ ಪಾಠ ಪ್ರಸ್ತುತತೆ ಕಳೆದುಕೊಳ್ಳುತ್ತಿರುವುದರ ಸೂಚನೆಯೆ? ಇದು ಉಚ್ಚ ಶಿಕ್ಷಣದ ಅಧ್ಯಾಪಕ ವೃಂದ ಉತ್ತರ ಕಂಡುಕೊಳ್ಳಬೇಕಾದ ಪ್ರಶ್ನೆ ಎಂಬುದೂ ನನ್ನ ಅಭಿಮತ.

ಹಿಂದೆ ನಮ್ಮ ತಲೆಮಾರಿನವರು ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ಸಮಯದಲ್ಲಿ ತರಗತಿಗಳನ್ನು ಬಹಿಷ್ಕರಿಸಿದರೂ ಗ್ರಂಥಾಲಯವನ್ನು ತೆರೆದಿರುತ್ತಿದ್ದರು. ಆಸಕ್ತರು ಓದಿಕೊಳ್ಳಬಹುದಿತ್ತು. ಈಗ ಸ್ಟ್ರೈಕುಗಳಾದರೆ ಮೊದಲು ಮುಚ್ಚಿಸುವುದೇ ಲೈಬ್ರರಿಯನ್ನು. ಯಾಕೆಂದರೆ ತಾವು ಸ್ಟ್ರೈಕು ಮಾಡುವಾಗ ಬೇರೆ ಯಾರಾದರೂ ಓದಿಬಿಟ್ಟಾರು ಎಂಬ ಭಯ. ಒಂದು ರೀತಿಯ ಮೌಲ್ಯದ್ವೇಷ ನಮ್ಮ ಉಚ್ಚಶಿಕ್ಷಣ ಕೇಂದ್ರಗಳನ್ನು ಕಾಡುತ್ತಿರುವ ರೋಗ. ಇತ್ತ, ಲೈಬ್ರರಿಗಳವರು ಈಗೀಗ ಒಂದು ಶಿಳ್ಳೆ ಕೇಳಿದರೆ ಸಾಕು, ಗ್ರಂಥಾಲಯದ ಆಸ್ತಿಪಾಸ್ತಿ ರಕ್ಷಣೆಯ ನೆಪದಲ್ಲಿ ಸ್ವಯಂ ಬಾಗಿಲು ಮುಚ್ಚಿಬಿಡುತ್ತಾರೆ. ಹೀಗಾಗಿ ಸ್ಟ್ರೈಕುಗಳ ಹೆಸರಲ್ಲಿ, ಪರೀಕ್ಷೆಗಳು ಸಮೀಪ ಇರುವಾಗಲೂ ಲೈಬ್ರರಿಗಳು ಬಾಗಿಲು ಮುಚ್ಚಿರುವ ದಿನಗಳೇ ಹೆಚ್ಚಾಗುತ್ತಿವೆ!

ಸಾಮಾನ್ಯವಾಗಿ ಕಾಲೇಜುಗಳಲ್ಲಿ ಸ್ಟ್ರೈಕುಗಳಾಗುವುದು ಕ್ಯಾಂಪಸ್ಸುಗಳಾಚೆಯ, ಶೈಕ್ಷಣಿಕ ಸಂಗತಿಗಳಿಗೆ ಹೊರತಾದ ವಿಷಯಗಳಿಗೇ ಹೆಚ್ಚು. ಅವರಿಗೆ ಸಂಬಂಧ ಪಡುವ ಸಾಮಾನ್ಯ ಹಕ್ಕೊತ್ತಾಯ, 'ಪರೀಕ್ಷೆ ಮುಂದೂಡಬೇಕು' ಎಂಬುದಾಗಿರುತ್ತದೆ. ಕಳೆದ ಎರಡು ದಶಕಗಳ ಅನುಭವದಲ್ಲಿ ಹೇಳುವುದಾದರೆ ಪರೀಕ್ಷೆಗಳ ಮುಂದೂಡುವಿಕೆ ಬೇಕಾಗಿರುವುದು ಎಲ್ಲೋ ಕೆಲವರಿಗೆ. ಆದರೆ ಅವರಿಗಾಗಿ ಇಡೀ ವ್ಯವಸ್ಥೆಯೇ ಬುಡಮೇಲಾಗುತ್ತದೆ! ಈ ಬಗ್ಗೆ ಯಾರಿಗೂ ವಿಷಾದವಾಗುವುದಿಲ್ಲ! ಯಾಕೆ?

ನಿಜ. ಒಮ್ಮೆ ಸ್ಟ್ರೈಕು ಆರಂಭಿಸಿದಮೇಲೆ ವಿದ್ಯಾರ್ಥಿಶಕ್ತಿ ತಮಗೆ ಬೇಕಾಗಿದ್ದನ್ನು ಸಾಧಿಸದೇ ಬಿಡುವುದಿಲ್ಲ. ರಾಜ್ಯಶಕ್ತಿಯೇ ವಿದ್ಯಾರ್ಥಿಶಕ್ತಿಯ ವೈರ ಕಟ್ಟಿಕೊಳ್ಳಲು ಬಯಸುವುದಿಲ್ಲ. ವೋಟ್ ಬ್ಯಾಂಕ್ ರಾಜಕಾರಣದಲ್ಲಿ ನಿಷ್ಣಾತರಾದವರು ವಿದ್ಯಾರ್ಥಿಗಳ ಬೇಡಿಕೆ ಸರಿಯೇ ತಪ್ಪೇ ಎಂದು ಯೋಚಿಸುವ ಗೋಜಿಗೆ ಹೋಗದೇ ಅವರ ಪರವಾಗಿ ನಿಲ್ಲುವುದರಿಂದ ವಿದ್ಯಾರ್ಥಿಗಳು ಕೇಳಿದ್ದಕ್ಕೆಲ್ಲ ಇಂದು ವ್ಯವಸ್ಥೆಗಳು ಒಪ್ಪಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮುಂದೊಂದು ದಿವಸ ಪರೀಕ್ಷೆಗಳೇ ಬೇಡವೆಂದು ಕಾಲೇಜು ವಿದ್ಯಾರ್ಥಿಗಳು ಬೀದಿಗಿಳಿದರೆ ಆಡಳಿತ ವ್ಯವಸ್ಥೆ ತಲೆಬಾಗುವ ಬಗ್ಗೆ ಯಾವುದೇ ಸಂಶಯವಿಲ್ಲ. ನಿಜವೆಂದರೆ ಇಂದಿನ ಸ್ಥಿತಿಯಲ್ಲಿ ವಿಶ್ವವಿದ್ಯಾನಿಲಯಗಳು ಪರೀಕ್ಷೆ ನಡೆಸುವ ಜವಾಬ್ದಾರಿಗಳಿಂದ ಹೊರಬಂದು 'ಈತ/ಈಕೆ ಕೋರ್ಸ್‌ನ್ನು ಮಾಡಿದ್ದಾನೆ/ಳೆ' ಎಂದು ದೃಢೀಕರಿಸುವ ಏಜೆನ್ಸಿಯಾಗಿ ಉಳಿಯುವುದೇ ಒಳ್ಳೆಯದೆಂದು ಅನ್ನಿಸುತ್ತದೆ.

ವಿಷಾದವೆಂದರೆ ಬೆರಳೆಣಿಕೆಯಷ್ಟು ಜನ ಸ್ಟ್ರೈಕುಗಳ ನೆಪದಲ್ಲಿ ವ್ಯವಸ್ಥೆಯನ್ನೇ ಬುಡಮೇಲೆ ಮಾಡುವಾಗ ಬಹುಸಂಖ್ಯಾತರಾದ ಜನ ನಿರ್ಲಿಪ್ತರಾಗಿದ್ದು ಅನ್ಯಾಯವನ್ನು ಸಹಿಸಿಕೊಳ್ಳುತ್ತಾರೆ ಎಂಬುದು. ಕೆಲವೊಮ್ಮೆ ಕೆಲವೇ ಜನ ಧಾಂಡಿಗರು ನ್ಯಾಯಸಮ್ಮತವಲ್ಲದ ಬೇಡಿಕೆಗಳೂ ಬಹುಸಂಖ್ಯಾತರ ನಿರ್ಲಿಪ್ತತೆಯಿಂದಾಗಿ ಮೇಲುಗೈ ಪಡೆಯುತ್ತವೆ. ಉದಾಹರಣೆಗೆ ಹೆಚ್ಚಿನವರಿಗೆ ಪರೀಕ್ಷೆ ಮುಂದೂಡುವುದು ಬೇಕಿರುವುದಿಲ್ಲ. ಅದರಿಂದ ತಮಗೇ ತೊಂದರೆಯೆಂದು ಗೊತ್ತಿರುತ್ತದೆ. ಆದರೆ ಪರೀಕ್ಷೆ ಮುಂದೂಡಬೇಕೆಂಬ ಕೆಲವೇ ಜನರ ಬೇಡಿಕೆಗೆ ವ್ಯವಸ್ಥೆ ಮಣಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದು ಯಾಕೆಂದರೆ, ಬಹುಸಂಖ್ಯಾತರಾದವರು ಸುಮ್ಮನೇ ಕುಳಿತಿರುತ್ತಾರೆ, ತಮಗೆ ಅನ್ಯಾಯವಾದಾಗಲೂ ಧಿಕ್ಕರಿಸುವುದಿಲ್ಲ. ಹೆದರಿಕೊಂಡು ಕುಳಿತಿರುತ್ತಾರೆ. ಒಂದು ಮಾತಿದೆ 'ನಮ್ಮ ಯೋಗ್ಯತೆಗೆ ತಕ್ಕದ್ದನ್ನೇ ನಾವು ಪಡೆಯುತ್ತೇವೆ' (We get what we deserve) ಎಂಬುದಾಗಿ. ಬಹುಸಂಖ್ಯೆಯ ಒಳ್ಳೆಯವರು ಅನ್ಯಾಯವಾದಾಗಲೂ ಪ್ರತಿಭಟಿಸದ ಹೇಡಿಗಳಾದಾಗ ಕೆಟ್ಟವರೇ ವಿಜೃಂಭಿಸುವುದು ಅತ್ಯಂತ ಸಹಜ. ಇಲ್ಲಿಯೇ ಸ್ವಾಮಿ ವಿವೇಕಾನಂದರ ಮಾತು ಆಪ್ತವಾಗುವುದು 'ಕಬ್ಬಿಣದ ಸ್ನಾಯುಗಳು ಮತ್ತು ಉಕ್ಕಿನ ನರಗಳು' ('Muscles of iron and nerves of steel'). ಈ ಗಟ್ಟಿತನ ಇರುವ ಧೈರ್ಯವಂತ ಜನ ಬೇಕು. ಬುದ್ಧಿವಂತರು ಪುಕ್ಕಲರಾಗಬಾರದು. ಅಂಥವರು ಕೆಲವೇ ಜನ ಸೇರಿದರೂ ಮಹತ್ತ್ವದ್ದನ್ನು ಸಾಧಿಸಬಹುದು. ಇಂದಿನ ಪರಿಸ್ಥಿತಿಯಲ್ಲಿ ಅದು ಸಾಧ್ಯವಾದೀತೆ?

### ಮಹಾಭಾರತದ ವೀರಸಂದೇಶ

ಉತ್ತರದ ಸಿಂಧ್ ಪ್ರಾಂತದಲ್ಲಿ ಸಂಜಯ ಎಂಬ ಹೆಸರಿನ ಒಬ್ಬ ರಾಜನಿದ್ದ. ಅವನ ತಾಯಿಯ ಹೆಸರು ವಿದುಲಾ. ಆಕೆ ಒಬ್ಬ ವೀರ ರಾಜಮಾತೆ. ತನ್ನ ಮಗ ಧೈರ್ಯಶಾಲಿಯಾಗಲು ಅವಳು ಹೇಗೆ ಸ್ಫೂರ್ತಿ ನೀಡಿದಳು ಎಂಬುದನ್ನು ಮಹಾಭಾರತದ ಪ್ರಸಂಗ ತಿಳಿಸುತ್ತದೆ. ಒಮ್ಮೆ ಯುದ್ಧಕ್ಕೆ ಹೋದ ಸಂಜಯ ಸೋತು ಹತಾಶನಾಗಿ ಹಿಂದಿರುಗಿದ. ತಾಯಿ ಆತನ ರಾಜಯೋಗ್ಯ ಪರಾಕ್ರಮವನ್ನು ಬಡಿದೆಬ್ಬಿಸಲು ನಾನಾ ರೀತಿಯಲ್ಲಿ ಪ್ರಯತ್ನಿಸಿದಳು. ಆದರೆ ಏನೂ ಪ್ರಯೋಜನವಾಗಲಿಲ್ಲ. ಕೊನೆಗೊಮ್ಮೆ ಅವಳು ಹೇಳಿದ ಒಂದು ಮಾತಿನಲ್ಲಿ ಎಷ್ಟು ಅದ್ಭುತವಾದ ಶಕ್ತಿ ಇತ್ತೆಂದರೆ ಅದು ಸಂಜಯನ ಪರಾಕ್ರಮ ಜಾಗೃತವಾಗುವಂತೆ ಮಾಡಿತು. ಆ ವಾಕ್ಯ ಕೆಲವೇ ಪದಗಳಲ್ಲಿ ಅದ್ಭುತವಾದ ಸ್ಫೂರ್ತಿಯನ್ನು ನೀಡುತ್ತದೆ. ಆ ರಾಜಮಾತೆ ತನ್ನ ಮಗನಿಗೆ ಸಾವಿರಾರು ವರ್ಷಗಳ ಹಿಂದೆ ಹೇಳಿದ್ದನ್ನು ಇಂದು ಭರತಮಾತೆಯೂ ತನ್ನ ಮಕ್ಕಳಿಗೆ ಹೇಳುತ್ತಿದ್ದಾಳೆ. **ಮುಹೂರ್ತಂ ಜ್ವಲಿತಂ ಶ್ರೇಯಃ ನ ತು ಧೂಮಾಯಿತಂ ಚಿರಮ್** "ಯುಗಗಳವರೆಗೆ ಹೊಗೆಯಾಡಿಕೊಂಡಿರುವುದಕ್ಕಿಂತ ಮುಹೂರ್ತವಾದರೂ ಮಾತ್ರ ಜ್ವಲಿಸುವುದು ಶ್ರೇಯಸ್ಕರ!" (ಉದ್ಯೋಗ ಪರ್ವ, ೧೩೦, ೧೫) ಆಧುನಿಕ ಕಾಲದಲ್ಲಿ ನಮ್ಮೆದುರಿಗೆ ಸ್ವಾಮಿ ವಿವೇಕಾನಂದರ ನಿದರ್ಶನವಿದೆ. ತಮ್ಮ ಜೀವನದ ಕೇವಲ ಮೂವತ್ತೊಂಬತ್ತೇ ವರ್ಷಗಳ ಅಲ್ಪಾವಧಿಯ ಜೀವನದಲ್ಲಿ ಅವರು ಸಾಧಿಸಿದ್ದು ಅಗಾಧವಾದುದು!